ಕೆರೆಗಳ ಜೀರ್ಣೋದ್ಧಾರ

364 (574) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು): ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕು, ಕುಡುಮಲ ಕುಂಟೆ ಕೈಗಾರಿಕಾ ಪ್ರದೇಶದಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು 50 ಎಕರೆ ಜಮೀನು ಕಾಯ್ದಿರಿಸಿರುವುದು ನಿಜವಲ್ಲವೇ;

ಆ) ಹಾಗಿದ್ದಲ್ಲಿ, ಕಾಯ್ದಿರಿಸಿರುವ ಜಾಗವನ್ನು ಆಸಕ್ತಿ ಹೊಂದಿರುವ ಸಣ್ಣ ಉದ್ದಿಮೆದಾರರಿಗೆ ಯಾವಾಗ ಹಂಚಿಕೆ ಮಾಡಲಾಗುವುದು; ಇದರ ಬಗ್ಗೆ ಇಲಾಖೆ(ಯು) ಕೈಗೊಂಡಿರುವ ಕ್ರಮವೇನು?

ಶ್ರೀ ಸಿ.ಹೆಚ್. ವಿಜಯಶಂಕರ್ (ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು):

ಅ) ಹೌದು, ಗೌರಿಬಿದನೂರು ತಾಲ್ಲೂಕು, ಕುಡುಮಲಕುಂಟೆ ಕೈಗಾರಿಕಾ ಪ್ರದೇಶದಲ್ಲಿ ಸಣ್ಣ ಕೈಗಾರಿಕೆಗಳ ಉದ್ದಿಮೆದಾರರಿಗೆ ಕೈಗಾರಿಕಾ ವಸಾಹತು ಅಭಿವೃದ್ಧಿಪಡಿಸಲು 48 ಎಕರೆ ಜಮೀನು ಕಾಯ್ದಿರಿಸಲಾಗಿರುತ್ತದೆ.

ಆ) ಕಾಯ್ದಿರಿಸಿರುವ ಜಮೀನಿನ ಸ್ವಾಧೀನವನ್ನು ಕೆ.ಐ.ಎ.ಡಿ.ಬಿ.ಯಿಂದ ಪಡೆದು, ಬೇಡಿಕೆಗನುಗುಣವಾಗಿ ಕೈಗಾರಿಕಾ ವಸಾಹತು ಅಭಿವೃದ್ಧಿಪಡಿಸಿ ಕೈಗಾರಿಕಾ ನಿವೇಶನಗಳನ್ನು ಕೈಗಾರಿಕೋದ್ಯಮಿಗಳಿಗೆ ಹಂಚಿಕೆ ಮಾಡಲಾಗುವುದು.

ನೆಮ್ಮದಿ ಕೇಂದ್ರಗಳು

365 (575) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನ ಹೋಬಳಿ ಮಟ್ಟದ ನೆಮ್ಮದಿ ಕೇಂದ್ರಗಳು ಅಸಮರ್ಪಕವಾಗಿ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದರಿಂದ ರೈತರಿಗೆ ತೊಂದರೆಯಾಗುತ್ತಿಲ್ಲವೆ;

ಆ) ಹಿಂದಿನ ಪದ್ಧತಿಯಂತೆ ತಾಲ್ಲೂಕು ಕಛೇರಿಗಳಲ್ಲಿ ದಾಖಲೆಗಳನ್ನು ನೀಡುವ ಸಂಪ್ರದಾಯ ಮುಂದುವರಿಸಲು ಸಾಧ್ಯವಿಲ್ಲವೇ; ಹಾಗಿದ್ದಲ್ಲಿ, ನೆಮ್ಮದಿ ಕೇಂದ್ರದ ಕಾರ್ಯವೈಖರಿ ಸುಧಾರಿಸಲು ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):

ಅ) ನೆಮ್ಮದಿ ಕೇಂದ್ರಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸದೇ ಇರುವ ಬಗ್ಗೆ ಕೆಲವೊಂದು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ..

ಆ) ಇ-ತಂತ್ರಜ್ಞಾನದ ಮೂಲಕ ಸರ್ಕಾರದ ಸೇವೆಗಳನ್ನು ಗ್ರಾಮ ಮಟ್ಟದಲ್ಲಿ ನಾಗರೀಕರಿಗೆ ಅವರವರ ಮನೆ ಸಮೀಪದಲ್ಲಿ (ಹತ್ತಿರದ ಗ್ರಾಮದಲ್ಲಿ) ಒದಗಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ನೆಮ್ಮದಿ ಗ್ರಾಮೀಣ ಟೆಲಿಸೆಂಟರ್ ಯೋಜನೆಯನ್ನು ಖಾಸಗಿ-ಸಾರ್ವಜನಿಕ ಸಹಭಾಗಿತ್ವದಲ್ಲಿ ಜಾರಿಗೆ ತಂದಿದೆ. ಇತ್ತೀಚೆಗೆ ಕರ್ನಾಟಕದಲ್ಲಿ ಸಾರ್ವಜನಿಕ ಸೇವೆಗಳ ಪೂರೈಕೆಯ ಸಾಮಾಜಿಕ ಪರಿಶೋಧನೆ ಮೇಲಿನ ಅಧ್ಯಯನ ಕುರಿತು ಪಬ್ಲಿಕ್ ಅಫೇರ್ಸ್ ಸೆಂಟರ್ ಇವರು ಅಧ್ಯಯನ ವರದಿಯನ್ನು ತಯಾರಿಸಿರುತ್ತಾರೆ. ಇದರಂತೆ ಸರ್ಕಾರದ 8 ಮುಖ್ಯ ಸೇವೆಗಳಾದ (1) ಸಾರ್ವಜನಿಕ ಬಸ್ಸು ಸಾರಿಗೆ (2) ಸಾರ್ವಜನಿಕ ಪಡಿತರ ವ್ಯವಸ್ಥೆಯ ಮುಖಾಂತರ ಆಹಾರ ಮತ್ತು ನಾಗರೀಕ ಸರಬರಾಜು (3) ಪಿಂಚಣಿ ಯೋಜನೆಗಳು (4) ವೈದ್ಯಕೀಯ ಆರೋಗ್ಯ ರಕ್ಷಣೆ (5) ಪ್ರಾಥಮಿಕ ಆರೋಗ್ಯ ಕೇಂದ್ರಗಳು (6) ಜಿಲ್ಲಾ ಆಸ್ಪತ್ರೆಗಳು (7) ಸರ್ಕಾರಿ ಪ್ರೌಢಶಾಲೆಗಳು ಮತ್ತು (8) ನೆಮ್ಮದಿ ಕೇಂದ್ರಗಳು (ಪ್ರಮಾಣ ಪತ್ರಗಳ ದಾಖಲಾತಿ ಮತ್ತು ನೀಡುವಿಕೆ). ಇವುಗಳ ಪೈಕಿ ನೆಮ್ಮದಿ ಯೋಜನೆಯು ಅತ್ಯುತ್ತಮ ಎಂದು ವರದಿಯಾಗಿರುತ್ತದೆ. ಇದೊಂದು ವಿನೂತನ ಯೋಜನೆಯಾಗಿದ್ದು ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿರುವುದರಿಂದ ಹಿಂದಿನ ಪದ್ಧತಿಗೆ ಮರಳುವ ಅಗತ್ಯವಿರುವುದಿಲ್ಲ.

ನೆಮ್ಮದಿ ಕೇಂದ್ರಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಕೈಗೊಂಡಿರುವ ಕಾರ್ಯಕ್ರಮಗಳು ಈ ಕೆಳಕಂಡಂತಿವೆ:-

1. ದಿನಾಂಕ: 05.12.2009ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 148 ಇಜಿವಿ 2009ರನ್ವಯ ಜಿಲ್ಲಾ ಸಮನ್ವಯ ಸಮಿತಿಯನ್ನು ಪುನರ್ ರಚಿಸಲಾಗಿದೆ. ಹಾಗೂ ಜಿಲ್ಲೆಯ ನೆಮ್ಮದಿ ಕೇಂದ್ರಗಳ ಸಂಪೂರ್ಣ ನಿರ್ವಹಣಾ ಜವಾಬ್ದಾರಿಯನ್ನು ಆಯಾಯ ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ.
2. ಆಯಾ ಜಿಲ್ಲೆಯ ನೆಮ್ಮದಿ ಕೇಂದ್ರಗಳ ನಿರ್ವಹಣೆಗಾಗಿ ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಆಡಳಿತಾತ್ಮಕ ಮತ್ತು ಹಣಕಾಸಿನ ಅಧಿಕಾರವನ್ನು ಕೂಡ ನೀಡಲಾಗಿದೆ.

3. ಯೋಜನೆಯ ಪಾಲುದಾರರು ತೊಡಗಿಸಿದ ಜನರನ್ನು ದುರ್ನಡತೆ, ಸಾರ್ವಜನಿಕರ ದೂರು, ಅಸಮರ್ಪಕ ಕಾರ್ಯನಿರ್ವಹಣೆ ಇತ್ಯಾದಿ ಕಾರಣಗಳಿಗಾಗಿ ಬದಲಾಯಿಸುವ ಸಂಪೂರ್ಣ ಅಧಿಕಾರವನ್ನು ಜಿಲ್ಲಾ ಸಮನ್ವಯ ಸಮಿತಿಗೆ ನೀಡಲಾಗಿದೆ.
4. ನೆಮ್ಮದಿ ಕೇಂದ್ರಗಳಲ್ಲಿ ಕೆಲಸದ ಒತ್ತಡ ಇದ್ದಂತಹ ಸಂದರ್ಭಗಳಲ್ಲಿ, ಹೆಚ್ಚಿನ ಜನರನ್ನು ತೊಡಗಿಸಲು ಖಾಸಗಿ ಪಾಲುದಾರರಿಗೆ ಸೂಚಿಸಬಹುದಾಗಿದ್ದು, ಅದರಂತೆ ಪಾಲುದಾರರು ಕ್ರಮ ಕೈಗೊಳ್ಳದಿದ್ದಲ್ಲಿ, ಸ್ಥಳೀಯರನ್ನು ತಾತ್ಕಾಲಿಕವಾಗಿ ಆಪರೇಟರ್‌ಗಳಾಗಿ ತೊಡಗಿಸುವ ಸಂಪೂರ್ಣ ಅಧಿಕಾರವನ್ನು ಜಿಲ್ಲಾ ಸಮನ್ವಯ ಸಮಿತಿಗೆ ನೀಡಲಾಗಿದೆ.
5. ಜಿಲ್ಲೆಯ ನೆಮ್ಮದಿ ಕೇಂದ್ರಗಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಪಡೆಯುವ ಸಂಪೂರ್ಣ ಅಧಿಕಾರವನ್ನು ಜಿಲ್ಲಾ ಸಮನ್ವಯ ಸಮಿತಿಗೆ ನೀಡಲಾಗಿದೆ.
6. ನೆಮ್ಮದಿ ಕೇಂದ್ರಗಳಲ್ಲಿ ವಿದ್ಯುಚ್ಛಕ್ತಿ, ನೀರು, ಲೇಖನ ಸಾಮಗ್ರಿ ದಾಸ್ತಾನು, ಇಂಟರ್‌ನೆಟ್ ಕನೆಕ್ಟಿವಿಟಿ ಇನ್ನಿತರೆ ಯಾವುದೇ ಮೂಲಭೂತ ಸೌಕರ್ಯಗಳ ಕೊರತೆ ನೀಗಿಸುವ ಸಲುವಾಗಿ ಪ್ರತಿ ಜಿಲ್ಲಾಧಿಕಾರಿಗಳಿಗೆ ತಲಾ 2.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
7. ಇದಲ್ಲದೆ ಮಾಹೆಯಾನ ನೆಮ್ಮದಿ ಉಸ್ತುವಾರಿ ಕೋಶ ಸ್ವೀಕರಿಸುವ ಆರ್.ಟಿ.ಸಿ. ಆರ್‌ಡಿಎಸ್ ವಹಿವಾಟಿನ ಸಂಪೂರ್ಣ ಹಣವನ್ನು ಜಿಲ್ಲಾಧಿಕಾರಿಗಳಿಗೆ ಸಮನಾಗಿ ಹಂಚಲಾಗುತ್ತಿದೆ.
8. ನೆಮ್ಮದಿ ಕೇಂದ್ರಗಳ ಕಾರ್ಯನಿರ್ವಹಣೆ ಕುರಿತು ಎಲ್ಲಾ ವಿಭಾಗಾಧಿಕಾರಿಗಳು/ಜಿಲ್ಲಾಧಿಕಾರಿಗಳೊಂದಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ (ಇ-ಆಡಳಿತ) ಇವರ ನೇತೃತ್ವದಲ್ಲಿ ವಿಡಿಯೋ ಕಾನ್‌ಫೆರೆನ್ಸ್ ನಡೆಸಲಾಗುತ್ತಿದೆ.
9. ಬೆಂಗಳೂರು ವಿಭಾಗದ ಪ್ರತಿ ಗ್ರಾಮ ಪಂಚಾಯತಿಯಲ್ಲಿ, ನೆಮ್ಮದಿ ಯೋಜನೆಯ ಮಾದರಿಯಲ್ಲಿಯೇ ಸಾಮಾನ್ಯ ಸೇವಾ ಕೇಂದ್ರ (ಕಾಮನ್ ಸರ್ವೀಸ್ ಸೆಂಟರ್)ಗಳನ್ನು ತೆರೆಯಲು

ಮೆ॥ ಗ್ಲೋಡೈನ್ ಟೆಕ್ನೊ ಸರ್ವ್ ಲಿಮಿಟೆಡ್ ಇವರಿಗೆ Letter of Intentನ್ನು ಈಗಾಗಲೇ ನೀಡಲಾಗಿದೆ.

ಅರಣ್ಯ ಭೂಮಿ

366 (719) ಶ್ರೀ ಸಿದ್ದು ಸವದಿ (ತೇರದಾಳ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಡಿಯುವ ನೀರು, ಶಾಲೆ, ಸರ್ಕಾರಿ ಆಫೀಸುಗಳಿಗೆ ಹೆಲಿಪ್ಯಾಡ್ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಅರಣ್ಯ ಭೂಮಿಯನ್ನು ಆಯಾ ಇಲಾಖೆಗೆ ಮಂಜೂರು ಮಾಡಲು ಇರುವ ನಿಯಮಾವಳಿಗಳೇನು ;

ಆ) ಸದರಿ ಚಟುವಟಿಕೆಗಾಗಿ ತೇರದಾಳ ಮತಕ್ಷೇತ್ರದ ಬನಹಟ್ಟಿಯಲ್ಲಿ ಜಮೀನು ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಯಾವಾಗ ಮತ್ತು ಎಷ್ಟು ಜಮೀನನ್ನು ಮಂಜೂರು ಮಾಡಲಾಗುವುದು?

ಶ್ರೀ ಸಿ.ಹೆಚ್. ವಿಜಯಶಂಕರ್ (ಅರಣ್ಯ ಸಚಿವರು):

ಅ) ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಗಳಿಗೆ ಮಂಜೂರು ಮಾಡುವಾಗ ಅರಣ್ಯ (ಸಂರಕ್ಷಣಾ) ಕಾಯ್ದೆ-1980ರ ಪ್ರಕಾರ ಅವಶ್ಯಕ ಪ್ರಸ್ತಾವನೆಗಳನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ. ಅರಣ್ಯ (ಸಂರಕ್ಷಣಾ) ಕಾಯ್ದೆ 1980ರಡಿ ಕೇಂದ್ರ ಸರ್ಕಾರದ ಅನುಮೋದನೆ ದೊರೆತ ನಂತರ ಅರಣ್ಯ ಭೂಮಿಯನ್ನು ಗೇಣಿ ಆಧಾರದ ಮೇಲೆ ಹಸ್ತಾಂತರಿಸಲಾಗಿದೆ.

ಆ) ಈ ಚಟುವಟಿಕೆಗಳಿಗಾಗಿ ತೇರದಾಳ ಮತ ಕ್ಷೇತ್ರದ ಬನಹಟ್ಟಿಯಲ್ಲಿ ಯಾವುದೇ ಅರಣ್ಯ ಜಮೀನು ಕೋರಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಆಸಂಗಿ ಕೈಗಾರಿಕಾ ಪ್ರದೇಶ

367 (738) ಶ್ರೀ ಸಿದ್ದು ಸವದಿ (ತೇರದಾಳ್): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನ ಆಸಂಗಿ ಮತ್ತು ಬನಹಟ್ಟಿಯಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ಸೇರಿದ ಅಭಿವೃದ್ಧಿಪಡಿಸಿದ್ದು ಎಷ್ಟು ಮತ್ತು ಒಟ್ಟು ಪ್ರದೇಶವೆಷ್ಟು;